ಕೇವಲ ತನ್ನೊಬ್ಬಳದು. ಅದೇ ಹುಮ್ಮಸ್ಸಿನಲ್ಲಿ ಇನ್ನೂ ಸ್ವಲ್ಪ ಮುಂದೆ ಹೋದಳು... ಇನ್ನೂ ಎರಡು ರಸ್ತೆ ದಾಟಿ, ಹೋಗುತ್ತಿದ್ದಂತೆ ಏದುಸಿರು ಬರುತ್ತಿದೆ, ಪೆಡಲ್ ತುಳಿಯುವಾಗ ಮೊಣಕಾಲು ಕೊಂಚ ನೋಯುತ್ತಿದೆ ಎಂಬುದು ಅರಿವಿಗೆ ಬರುತ್ತಿದ್ದಂತೆ ಹೈಸ್ಕೂಲು ದಿನಗಳಲ್ಲಿ ಮೈಲಿಗಟ್ಟಲೆ ಸೈಕಲ್ ತುಳಿಯುತ್ತಿದ್ದವಳು ತಾನೇನಾ ಅನ್ನಿಸಿತು. ಅಜ್ಜನ ಮನೆಯಿಂದ ಟಾರ್ ರಸ್ತೆವರೆಗೆ ಆ ಮಣ್ಣುಹಾದಿಯಲ್ಲಿ ಪಕ್ಕದ ಮನೆಯ ಗೋಪಣ್ಣನ ಲೊಟಗಾಸಿ ಸೈಕಲನ್ನು ಕಾಡಿಬೇಡಿ ಇಸಿದುಕೊಂಡು ಸೈಕಲ್ ಆಡಲು ಹೋಗುತ್ತಿದ್ದ ದಿನಗಳವು... ಗೋಪಣ್ಣ ಸೈಕಲ್ ಕೊಡಲು ಹಿಂದೆಮುಂದೆ ನೋಡಿದರೂ, ಆರಂಭದಲ್ಲಿ ಸೈಕಲ್ ಕಲಿಸಲು ಇಲ್ಲವೆಂದಿರಲಿಲ್ಲ. 'ನೀ ಈ ಮಣ್ಣಿನ ರಸ್ತೇಲಿ ಸೈಕಲ್ ಬ್ಯಾಲೆನ್ಸ್ ಮಾಡದು ಕಲಿತ್ರೆ, ವಿಮಾನನೂ ಬಿಡಬೌದು' ಎನ್ನುತ್ತಿದ್ದ ಗೋಪಣ್ಣ. ಈಗ ಕಣ್ಣುಮುಚ್ಚಿ ನೆನೆದರೆ ಏರುತಗ್ಗಿನ ಮಣ್ಣುಹಾದಿ ಮನದೊಳಗೆ ಹಬ್ಬುತ್ತದೆ. ಏದುಸಿರು ಇನ್ನೂ ಹೆಚ್ಚಾದಂತೆ ಅನ್ನಿಸಿತು. ಅರೆ, ನೀರಿನ ಬಾಟಲಿಯೂ ಇಲ್ಲ... ಬಾಯೊಣಗಿ ಉಸಿರು ಸಿಕ್ಕಿಕೊಂಡಂತೆ ಆದರೆ ಕಷ್ಟ ಎಂದುಕೊಳ್ಳುತ್ತ ಸೈಕಲನ್ನು ವಾಪಸು ತಿರುಗಿಸಿದಳು. ಅಡ್ಡರಸ್ತೆಯಿಂದ ಮುಖ್ಯ ರಸ್ತೆಗೆ ತಿರುಗುತ್ತಿದ್ದಂತೆ ಇನ್ನು ಆಗುವುದೇ ಇಲ್ಲ ಎನ್ನಿಸಿ, ಸೈಕಲಿಂದ ಇಳಿದು, ಮೆಲ್ಲಗೆ ದೂಡಿಕೊಂಡು ಬಂದಳು. ಸದ್ಯ, ದೊಡ್ಡ ಕಾರಿನವರಾರೂ ಇನ್ನೂ ಬಂದಿರಲಿಲ್ಲ.

ಆ ದಿನ ಆಫೀಸಿನಲ್ಲಿ ವಿನುತಾ ಸೈಕಲ್ ಗುಂಗಿನಲ್ಲಿಯೇ ಇದ್ದಳು. ವಾರಾಂತ್ಯದಲ್ಲಿ ವಾಕ್ ಹೋಗುವಾಗ ಕಾಣುವ ಆ ಕಡೆಯ ಬಿ ಬ್ಲಾಕಿನ ಸೈಕಲ್ ಸವಾರಿಯ ರೀಟಾ ನೆನಪಾದಳು. ಈಗ ಒಂದೆರಡು ವರ್ಷಗಳಿಂದ ರೀಟಾ ಬೆಳಗ್ಗೆ, ಸಂಜೆ ಸೈಕ್ಲಿಂಗ್ ಮಾಡೋದನ್ನು ನೋಡಿದ್ದಳು. ಆಹಾ, ಏನಪ್ಪ ಇವಳ ಗತ್ತು ಎಂದು ಕೊಂಚ ಹೊಟ್ಟೆಕಿಚ್ಚೂ ಪಟ್ಟಿದ್ದಳು. ಬಿಗಿಯಾದ ಟ್ರ್ಯಾಕ್‌ಸೂಟ್ ಹಾಕಿಕೊಂಡು, ಕೂದಲನ್ನು ಎತ್ತಿ ಬಾಚಿ ಒಂದು ಗಂಟು ಹಾಕಿ ಅಥವಾ ಹಾಗೆಯೇ ಬಿಟ್ಟುಕೊಂಡು ಸೈಕಲ್ ಹಿಡಿದ ನೀಳ ಕೈಗಳಲ್ಲಿ ಇನ್ನಿಲ್ಲದ ಆತ್ಮವಿಶ್ವಾಸವನ್ನು ಚಿಮ್ಮಿಸುತ್ತ ತೇಲಿದಂತೆ ಸಾಗಿ ಹೋಗುವ ಕೋಲು ಮುಖದ ಸುಂದರಿ... ಆದರೆ ಅಷ್ಟೆಲ್ಲ ಸಲ ಅವಳನ್ನು ನೋಡಿದಾಗಲೂ, ಅರೆ ಎಷ್ಟು ಚಂದ ಒಂದು ಲಾಸ್ಯದಲ್ಲಿ ಸಾಗುತ್ತಾಳೆ ಎಂದು ಕೊಂಚ ಅಸೂಯೆಯಿಂದಲೇ ದಿಟ್ಟಿಸಿದ್ದರೂ ಸೈಕಲ್ ತುಳಿಯಬೇಕೆಂದು ಅನ್ನಿಸಿರಲಿಲ್ಲ... ಇವತ್ತೇ ಯಾಕೆ ಅನ್ನಿಸಿತು... ಐದು ಗಂಟೆಗೆ ಇನ್ನೇನು ವಿನುತಾ ಆಟೋ ಬುಕ್ ಮಾಡಲೆಂದು ಫೋನ್ ತೆಗೆಯುವುದಕ್ಕೂ ವಾಟ್ಸಾಪಿನಲ್ಲಿ ರಮೇಶನ ಮೆಸೇಜೊಂದು ಛಕ್ಕನೆ ಬೀಳುವುದಕ್ಕೂ ಸರಿಹೋಯಿತು.

'ನಾ ಬರೋದು ಲೇಟಾಗುತ್ತೆ... ರಂಗಶಂಕರಕ್ಕೆ ಹೋಗ್ತಿದೀನಿ' ಎಂದಷ್ಟೇ ಹಾಕಿದ್ದ. ಓ...ಸಂಜೆ ಏಳೂವರೆ ನಾಟಕ ಎಂದರೆ ಇವನು ಬರೋದು ಒಂಬತ್ತೂವರೆ-ಹತ್ತಾಗುತ್ತೆ. ಯಾವ ನಾಟಕ ಅಂತಲೂ ಬರೆದಿಲ್ಲ...ಅಷ್ಟರಮಟ್ಟಿಗೆ ಭಾರೀ ಖಾಸಗಿಕ್ಷಣಗಳು ಇವಂದು ಎಂದು ರೇಗಿಕೊಳ್ಳುತ್ತಲೇ ಓಕೆ ಎಂದಷ್ಟೇ ಚುಟುಕಾಗಿ ಉತ್ತರಿಸಿದಳು. ಆಟೋ ಬುಕ್ ಮಾಡಲೆಂದು ಆಪ್ ತೆರೆದವಳಿಗೆ ಥಟ್ಟನೆ ಮತ್ತೆ ಸೈಕಲ್ ನೆನಪು. ಅಜ್ಜನ ಮನೆ ಹತ್ತಿರದ ಮಣ್ಣಿನ ಹಾದಿಯ ನೆನಪು. 'ಅದೆಂಥ...ಗಂಡುಬೀರಿ ಥರಾ ಸೈಕಲ್ ಹೊಡೆಯದು' ಹಿಂದಿನಿಂದ ಕೇಳುವ ಅಜ್ಜನ ಮಂತ್ರ. ಸೈಕಲ್ ಹಿಂದೆ ತುಸು ದೂರ ಬೆನ್ನತ್ತುವ ಗೋಪಣ್ಣನ ನಾಯಿ ತಿಮ್ಮು. ಪೆಡಲ್ ತುಳಿಯುತ್ತ ಬ್ಯಾಲೆನ್ಸ್ ಮಾಡುತ್ತ ತೇಲಿದಂತೆ ಸಾಗಿದ ಕ್ಷಣಗಳ ನೆನಪು. ಆ ನೆನಪುಗಳಿಗೆ ಮೆತ್ತಿದ ಗಂಧಗಾಳಿ. ಮರಳಿ ಬರುವಾಗ ದಣಪೆಯಲ್ಲಿ ನಿಂತ ಕೌತುಕದ ಕಣ್ಣಿನ ಅತ್ತೆ, 'ಸವಾರಿ ಹೆಂಗಿತ್ತೆ' ಪಿಸುನುಡಿ ಮತ್ತು ತನ್ನೊಬ್ಬಳದೇ ಆಗಿ ಉಳಿದ ಆ ಅಷ್ಟೂ ಕ್ಷಣಗಳ ನೆನಪು. ಅಷ್ಟೇ ಥಟ್ಟನೆ ನೆನಪಾಗಿದ್ದು ಮನೆಗೆ ಹೋಗುವ ದಾರಿಯಲ್ಲಿ ಡೆಕಾತ್ಲಾನ್ ಶಾಪ್ ನೋಡಿದಂತಿದೆ...ಅರೆ...ಹೌದಲ್ಲ, ಒಮ್ಮೆ ಅಲ್ಲಿಗೆ ಹೋಗಿ ನೋಡಿಯೇಬಿಡಣ. ಡೆಕಾತ್ಲಾನ್, ಬನ್ನೇರುಘಟ್ಟ ರಸ್ತೆ. ಬೆರಳುಗಳು ಟಕಟಕನೆ ಟೈಪಿಸಿದವು. ಆಟೋ ಮತ್ತೆ ಕ್ಯಾಬ್ ರೇಟ್ ಎಷ್ಟು. ಅರೆ ಇವತ್ತು ಸ್ವಲ್ಪ ಆರಾಮಾಗಿಯೇ ಹೋಗಣ ಎಂದುಕೊಳ್ಳುತ್ತ ಕ್ಯಾಬ್ ಬುಕ್ ಮಾಡಿದಳು. ವಾಶ್‌ರೂಮಿಗೆ ಹೋದಳು. ತೆಳುವಾಗಿ ಲಿಪ್‌ಸ್ಟಿಕ್ ಸವರಿಕೊಂಡಳು. ಕೂದಲು ಒಪ್ಪ ಮಾಡಿಕೊಂಡಳು. ಸಣ್ಣಗೆ ಲಾಲಾಲಾ ಹಾಡಿಕೊಂಡಳು. ಮೈಮನದಲ್ಲಿ ಪುಟ್ಟದೊಂದು ಪುಳಕ. ಮೇಲೆ ಎರಡನೇ ಮಹಡಿಗೆ ಹೋಗಿ, ರಾಜೋಳಿಗೆ ಬಾಯ್ ಹೇಳಲೇ ಎಂದುಕೊಳ್ಳುವಷ್ಟರಲ್ಲಿ ಕ್ಯಾಬ್ ಬಂದಿದ್ದು